

# ನಾಣ್ಯ ಮರ!

‘ಹಣ ಎಂದರೆ ಹೆಣವೂ ಬಾಯ್ಬಿಡುತ್ತದೆ’, ‘ದುಡ್ಡೇ ದೊಡ್ಡಪ್ಪ, ದುಡ್ಡಿದ್ದರೆ ದುನಿಯಾ’ ಎಂಬೆಲ್ಲಾ ಗಾದೆಗಳು ದುಡ್ಡಿನ ಮಹತ್ವವನ್ನು ಸಾರಿ ಸಾರಿ ಹೇಳುತ್ತವೆ. ದುಡ್ಡಿಲ್ಲದೆ ಯಾವ ಕೆಲಸವೂ ನಡೆಯುವುದಿಲ್ಲ. ಬಹುಶಃ ನೀವು ಚಿಕ್ಕವರಿದ್ದಾಗ ಬೆಲೆಬಾಳುವ ಸಾಮಾನು ಕೊಡಿಸೆಂದು ನೀವು ಅಮ್ಮನ ದುಂಬಾಲು ಬಿದ್ದಾಗ ಆಕೆ ದುಡ್ಡಿನ ಮರ ಇದೆಯೇನು? ಅಥವಾ ದುಡ್ಡೇನು ಮರದಲ್ಲಿ ಬಿಡುತ್ತದೆಯೇ? ಅಂತ ಹೇಳಿ ಖರ್ಚಿಗೆ ಮೂಲವಾಗುವ ನಿಮ್ಮ ಬೇಡಿಕೆಯನ್ನು ಮೊಟಕುಗೊಳಿಸಿರಬಹುದು. ದುಡ್ಡಿನ ಮರದ ಇರುವಿಕೆಯ ಬಗ್ಗೆ ನಿಮಗೆ ಗೊತ್ತಿದ್ದರೆ ಆಗಲೇ ಅಮ್ಮನಿಗೆ ನೀವು ತಿಳಿಸಬಹುದಿತ್ತೇನೋ?!

ನಾಣ್ಯಗಳನ್ನು ಬೆಂಡಾಗುವಷ್ಟು ಹೊಡೆದು ಮರದ ಕೊಂಬೆಯೊಳಗೆ ಹುದುಗಿಸಿರುವ ವಿಚಿತ್ರ ರೀತಿಯ ದುಡ್ಡಿನ ಮರಗಳು ಇಂಗ್ಲೆಂಡ್ ದೇಶದಲ್ಲಿ ನಿಮಗೆ ಕಾಣಸಿಗುತ್ತವೆ. ಯಾಕೆ ಈ ರೀತಿ ನಾಣ್ಯಗಳನ್ನು ಮರದಲ್ಲಿ ಈ ರೀತಿಯಾಗಿ ತೂರಿಸುತ್ತಾರೆಂದು ಯಾರಿಗೂ ಖಚಿತವಾಗಿ ಗೊತ್ತಿಲ್ಲ. ಕೆಲವರು ಹೇಳುವ ಪ್ರಕಾರ, ಜನರು ಎಷ್ಟು ಸಂಖ್ಯೆಯ ನಾಣ್ಯಗಳನ್ನು ಮರದಲ್ಲಿ ಹುದುಗಿಸುತ್ತಾರೋ ಅಷ್ಟು ಸಂಖ್ಯೆಯಲ್ಲಿ ಮಕ್ಕಳನ್ನು ಪಡೆಯುತ್ತಾರಂತೆ. ಇನ್ನೂ ಹಲವರು ನಾಣ್ಯವನ್ನು ಬೊಡ್ಡೆಯ ಮೇಲಿಟ್ಟು ಹೊಡೆಯುವುದು ಒಳ್ಳೆಯ ಅದೃಷ್ಟವನ್ನು ತರುತ್ತದೆ ಎಂದು ನಂಬಿದ್ದಾರೆ. ಒಟ್ಟಿನಲ್ಲಿ ಬಹಳಷ್ಟು ನಾಣ್ಯಗಳಿರುವ ದುಡ್ಡಿನ ಮರಗಳು ಬ್ರಿಟನ್ ನ ಎಲ್ಲೆಡೆ ನಿಮಗೆ ಕಾಣಸಿಗುತ್ತವೆ. ಇಂತಹ ದುಡ್ಡಿನ ಮರಗಳ ಹತ್ತಿರ ಹೋಗಲು ಸದ್ಯ ಬೇಕಾಗಿರುವುದು, ಇಂಗ್ಲೆಂಡ್ ವಿಮಾನಯಾನದ ಟಿಕೆಟ್ ಹಾಗೂ ನಾಣ್ಯವನ್ನು ಹೊರ ತೆಗೆಯುವ ಕಟಿಂಗ್ ಪ್ಲೇಯರ್ ಅಷ್ಟೆ.



■ ವಿದ್ಯಾ ವಿ. ಹಾಲಭಾವಿ